# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1063 (1173) |
| ಸದಸ್ಯರ ಹೆಸರು | : | ಶ್ರೀ ಡಿ.ಟಿ. ಶ್ರೀನಿವಾಸ್ |
| ಉತ್ತರಿಸಬೇಕಾದ ದಿನಾಂಕ | : | 27.08.2026 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪೌರಾಡಳಿತ ಸಚಿವರು |

| ಪ್ರಶ್ನೆ | | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಗರಾಭಿವೃದ್ಧಿ ಇಲಾಖೆಯಡಿ ಬರುವ ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ಸಂಖ್ಯೆ ಎಷ್ಟು; | ನಗರಾಭಿವೃದ್ಧಿ ಇಲಾಖೆಯಡಿ ಬರುವ ಮಹಾನಗರ ಪಾಲಿಕೆಗಳು: 13 ಮತ್ತು ನಗರ ಸಭೆಗಳು: 70 |
| ಆ) | ನಗರಸಭೆ ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳ ಸಂಖ್ಯೆ ಎಷ್ಟು; ಈ ಪೈಕಿ ಇ-ಖಾತಾ ಆಗದೇ ಇರುವ ಸ್ವತ್ತುಗಳ ಸಂಖ್ಯೆ ಎಷ್ಟು; ಬಾಕಿಯಿರುವ ಸ್ವತ್ತುಗಳಿಗೆ ಇ-ಖಾತಾ ನೀಡುವುದು ಯಾವಾಗ; | ನಗರಸಭೆ ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಒಟ್ಟು ಸ್ವತ್ತುಗಳ ಸಂಖ್ಯೆ:39,89,273.<br>ಇ-ಖಾತಾ ಆಗದೇ ಇರುವ ಸ್ವತ್ತುಗಳ ಸಂಖ್ಯೆ:19,80,804.<br>ಆಸ್ತಿ ಮಾಲೀಕರು citizen login ಮುಖಾಂತರ ಆನ್‌ಲೈನ್ ಅರ್ಜಿ ಸಲ್ಲಿಸಿದ್ದಲ್ಲಿ, ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ, ನಿಗದಿತ ಅವಧಿಯೊಳಗೆ ಇ-ಖಾತಾ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಇ-ಖಾತಾವನ್ನು ನೀಡಿದ ನಂತರ ಕಾನೂನಾತ್ಮಕವಾಗಿ ಸ್ವತ್ತನ್ನು ಖರೀದಿದಾರರಿಗೆ ಪೂರ್ಣವಾಗಿ ವರ್ಗಾವಣೆ ಮಾಡಲಾಗಿದೆಯೇ; | ಹೌದು.<br>ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ಪ್ರಕರಣ 106 ರನ್ವಯ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿರುವ ಕಂದಾಯ ನಿವೇಶನಗಳಿಗೆ ಸ್ವತ್ತು ತೆರಿಗೆ ವಿಧಿಸುವ ಉದ್ದೇಶದಿಂದ ಮಾತ್ರ ಇ-ಖಾತಾ ನೀಡಲಾಗುತ್ತಿದೆ. ಅಂತಹ ಕಟ್ಟಡಗಳು ಅಥವಾ ಖಾಲಿ ನಿವೇಶನ / ಭೂಮಿಗಳು ಕಾನೂನಿನ ಉಲ್ಲಂಘನೆಗಾಗಿ ಯಾವುದೇ ಕಾನೂನು ಕ್ರಮಕ್ಕೆ ಗುರಿಯಾಗಲು ಬದ್ಧವಾಗಿರುತ್ತವೆ.<br>ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಲ್ಲಿನ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ಅನಧಿಕೃತವಾಗಿ ಅಭಿವೃದ್ಧಿಪಡಿಸಲಾದ ಆಸ್ತಿಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ತರಲು, ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ, 1964 ಕ್ಕೆ ತಿದ್ದುಪಡಿ ಮಾಡಿ, ದಿನಾಂಕ:10.09.2024 ರೊಳಗೆ ನಿರ್ಮಾಣಗೊಂಡ ಅನಧಿಕೃತ ಬಡಾವಣೆಗಳಲ್ಲಿನ ಆಸ್ತಿಗಳಿಗೆ 'ಬಿ' ಖಾತಾ ನೀಡುವ ಅವಕಾಶ / ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ: UDD 178 GEL 2025 (E), ದಿನಾಂಕ:17.01.2026 ರಲ್ಲಿ ನಗರ ರಾಜ್ಯದ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಅನುಮೋದನೆ ಪಡೆಯದೆ ನಿರ್ಮಾಣಗೊಂಡು, 'ಬಿ' ಖಾತಾ ಹೊಂದಿರುವ ಆಸ್ತಿಗಳಿಗೆ, ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು, ವಿವಿಧ ವರ್ಗಗಳ ಆಸ್ತಿಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳ ಅನುಸಾರವಾಗಿ 'ಎ' ಖಾತಾ ನೀಡಲು ಅನುಮೋದನೆ ನೀಡಲಾಗಿದೆ. |
| ಈ) | ನಗರಸಭೆ ಮತ್ತು ಪುರಸಭೆಗಳಿಂದ ರೆವಿನ್ಯೂ ನಿವೇಶನಗಳಿಗೆ ನೀಡಿರುವ ಇ-ಖಾತಾಗಳು ಕಾನೂನು ಬದ್ಧವೇ; ಇವುಗಳನ್ನು ಸಕ್ರಮಗೊಳಿಸಲು ಸರ್ಕಾರದ ಹಂತದಲ್ಲಿ ಕೈಗೊಂಡಿರುವ ಕ್ರಮಗಳೇನು? | |

**ಸಂಖ್ಯೆ: ನಅಇ 244 ಜಿಇಎಲ್ 2026 (ಇ)**

**(ಹೆಚ್. ಸಿ. ಬಾಲಕೃಷ್ಣ)**
ಪೌರಾಡಳಿತ ಸಚಿವರು